ಡಿ.ಎಲ್. ಶ್ವೇತಾ, ಚನ್ನಗಿರಿ
*ರಾಷ್ಟ್ರಪತಿಗೂ, ರಬ್ಬರ್ ಸ್ಟ್ಯಾಂಪ್‌ಗೂ ಇರುವ ಸಾಮ್ಯತೆ ಏನು?*



ಕೈ ಗೆ ಅಧೀನವಾಗಿರುವುದು!

ಎಸ್.ಎ.ಮೋಹನ್ ರಾಜು, ಶಿವಮೊಗ್ಗ
*ಸತಿ ಮತ್ತು ಸವತಿ ಒಂದೇ ವಸತಿಯಲ್ಲಿದ್ದರೆ ಹೇಗಿರಬಹುದು?*
ಸೆಷನ್ ನಡೆಯುವ ಸಮಯದಲ್ಲಿನ ಪಾರ್ಲಿಮೆಂಟ್‌ನಂತೆ.

ಎಸ್. ಶ್ರೀಧರ್, ಬೆಂಗಳೂರು
*ಭಾಷಣವನ್ನು ಮೊದಲಿನಿಂದ ಕೊನೆಯವರೆಗೆ ಎಲ್ಲರೂ ಕೇಳುವಂತಾಗಲು ಏನು ಮಾಡಬೇಕು?*
ಸೌಂಡ್ ಸಿಸ್ಟಮ್ ಜೋರಾಗಿರಬೇಕು, ಹೊರಕ್ಕೆ ಹೋಗುವ ಬಾಗಿಲುಗಳನ್ನು ಬಂದ್ ಮಾಡಿರಬೇಕು!

ಕುಮಾರ ಚಲವಾದಿ, ಹೊಳೆನರಸಿಪುರ
*ಪರಸ್ತ್ರೀಯರ ಬಲೆಗೆ ನೀವೆಂದಾದರೂ ಬಿದ್ದಿದ್ದಿರಾ?*
ಇಬ್ಬರೂ ಒಬ್ಬಳಿಗೇ ಬಿದ್ದಿದ್ದೀವಲ್ಲಾ ಸ್ವಾಮಿ; ಅವಳೇ ಈ ಸುಧಾ!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ
*ನ್ಯಾಯದ ಬಾಲವೂ ಡೊಂಕೇ?*



ಅದು ನೇರವಾಗೇ ಇರುತ್ತದೆ; ವಾದಿ, ಪ್ರತಿವಾದಿಗಳ ವಕೀಲರು ಅದನ್ನು ತಿರುಚಿ ತಿರುಚಿ ಡೊಂಕಾಗಿಸುತ್ತಾರೆ!

ಎಸ್. ರಜನಿ, ಬೆಂಗಳೂರು
*ಪ್ರಿಯಕರನ ಮುತ್ತಿಗೂ, ಮಗುವಿನ ಮುತ್ತಿಗೂ ವ್ಯತ್ಯಾಸವೇನು?*
ಪ್ರಿಯಕರನ ಮುತ್ತು ಕಾವೇರಿಸುತ್ತದೆ; ಮಗುವಿನ ಮುತ್ತು ತಂಪೆರೆಯುತ್ತದೆ.

ವಿರಾಜ್, ಅಡೂರು
*ಸತ್ಯ ಹೇಳಬೇಕು ಸಾರ್, ನಿಮ್ಮ ಮನೆಮಂದಿಗೂ ಇದೇ ರೀತಿಯ ಉತ್ತರ ಕೊಡ್ತೀರಾ?*
ಕೊಡಬಹುದಿತ್ತು; ಆದರೆ ಮನೆಮಂದಿ ನನ್ನನ್ನು ಪ್ರಶ್ನಿಸುವುದೇ ಇಲ್ಲ, ಎಲ್ಲರೂ ಆರ್ಡರ್ ಮಾಡುವವರೇ!

ಎಂ.ಕೆ. ರವಿಕಾಂತ, ತುಮಕೂರು
*ಈಜು, ವಿದ್ಯೆ, ಡ್ರೈವಿಂಗ್ ಕಲಿಯಲು ಕಲಿಕಾಕೇಂದ್ರಗಳಿದ್ದಂತೆ ಲಂಚ ಪಡೆಯಲು ತರಬೇತಿ ಕೇಂದ್ರ ಇದ್ದಿದ್ದರೆ ಏನಾಗುತ್ತಿತ್ತು?*
ಕೆಲವೇ ದಿನಗಳಲ್ಲಿ ಆ ಕೇಂದ್ರದ ಬಾಗಿಲನ್ನು ತೆರೆಯಲೂ ಲಂಚ ತೆರಬೇಕಾಗುತ್ತಿತ್ತು!

ಎಂ.ಜಿ. ಶಿವರಾಂ, ಬೆಂಗಳೂರು
*ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ ಎಂಬ ಸರ್ವಜ್ಞ ವಚನ ಇಂದಿಗೆ ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಬೆಂಕಿಗೆ ಎಂದು ಬದಲಾದರೆ ಸೂಕ್ತವಲ್ಲವೇ?*
ಕೊಟ್ಟಿದ್ದು ತನಗೆ ಸರಿ; ಬಚ್ಚಿಟ್ಟಿದ್ದು ಬೆಂಕಿಗೆ ಅಲ್ಲ, ಬ್ಯಾಂಕಿಗೆ – ಸ್ವಿಸ್ ಬ್ಯಾಂಕಿಗೆ!

ಅಮರಯ್ಯ, ಕಬಾಡಗೇರಾ
*ಯಾವ ಸಂದರ್ಭದಲ್ಲಿ ಮೌನಿಯಾಗುವುದು ಸೂಕ್ತ?*
ಹೆಂಡತಿ ಮಾತನಾಡಲು ಆರಂಭಿಸಿದ ತಕ್ಷಣ!

ವರುಣ್ ವೈಭವ್, ಮೋಕ
*ಕೇಂದ್ರ ಹಾಗೂ ರಾಜ್ಯ ಮಂತ್ರಿಮಂಡಲದಲ್ಲಿ ಕಳಂಕರಹಿತ ಮಂತ್ರಿಗಳಿದ್ದರೆ ಸ್ವಲ್ಪ ಹೆಸರಿಸಿ ಪ್ಲೀಸ್...?*
ಕ್ಷಮಿಸಿ; ಕಳಂಕರ ಹಿತ ಮಂತ್ರಿಗಳದ್ದಾದರೆ ಹೇಳಬಹುದು!

ಪೇಂಟರ್ ಪಾಪು, ಸಂತೇಮರಹಳ್ಳಿ
*ಅನ್ನ ಹಾಕಿ ಸಾಕು ಎನಿಸಬಹುದು, ಆದರೆ ಹಣ ಕೊಟ್ಟು ಸಾಕು ಎನಿಸಲಾಗದು. ಏಕೆ?*
ಅನ್ನಕ್ಕೆ ಕೇವಲ ಹೊಟ್ಟೆಯೊಂದೇ ಸ್ಟೋರೇಜ್; ಹಣಕ್ಕಾದರೆ ಜೇಬು, ಪರ್ಸ್, ತಿಜೋರಿ, ಬೀರು, ಬ್ಯಾಂಕ್, ಸ್ವಿಸ್ ಬ್ಯಾಂಕ್......!

ಲ್ಯಾಂಡ್‌ಬ್ಯಾಂಕ್ ಡಿ. ಚಂದ್ರಕುಮಾರ್, ಬೆಂಗಳೂರು
*ಪಾಣಿಗ್ರಹಣಕ್ಕೂ, ಸೂರ್ಯಗ್ರಹಣಕ್ಕೂ ಏನು ವ್ಯತ್ಯಾಸ?*
ಪಾಣಿಗ್ರಹಣಕ್ಕೆ ಹಣ ಬೇಕು; ಸೂರ್ಯಗ್ರಹಣ ಫ್ರೀ!

## ಬಹುಮಾನಿತ ಪ್ರಶ್ನೆ

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ಮದುವೆಯಾಗಿ ಮನೆಯಲ್ಲಿರುವ ಹೆಣ್ಣನ್ನು ಹೌಸ್‌ವೈಫ್ ಅನ್ನುತ್ತಾರೆ; ಮದುವೆಯಾಗಿ ಮನೆಯಲ್ಲಿರುವ ಗಂಡನ್ನು ಏನೆನ್ನುತ್ತಾರೆ?*
ಏನೇನೇನೋ ಅನ್ನುತ್ತಾರೆ; ಸಭ್ಯತೆಯ ದೃಷ್ಟಿಯಿಂದ ಆ ಬೈಗುಳಗಳನ್ನೆಲ್ಲಾ ಈ ಅಂಕಣದಲ್ಲಿ ಪ್ರಕಟಿಸಲು ಸಾಧ್ಯವಿಲ್ಲ!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಕಳ್ಳನ ಹೆಂಡತಿ ಮುಂಡೆಯಾದರೆ ಕಳ್ಳಿಯ ಗಂಡ...?*
ಇವಳು ಜೈಲು ಸೇರುತ್ತಿದ್ದಂತೆಯೇ ಇನ್ನೊಬ್ಬಳ ಗಂಡ!

ಸೃಜನ ಜೈನ್, ಹೂವಿನಹಡಗಲಿ
*ಉತ್ತರ ಭಾನು ತೆರೆದೈತಾ, ಮುಗಿಲ ಬಳಗ ಕರಗೈತಾ ಸಾರ್?*
ಊಹೂಂ! ಪ್ರಶ್ನೆಯ ಸಾಗರ ಹರಡೈತಾ, ಉತ್ತರ ದೋಣಿಯು ಸಾಗೈತಾ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಆಗಿನ ಸನ್ಯಾಸಿಗಳಿಗೂ, ಈಗಿನ ಸನ್ಯಾಸಿಗಳಿಗೂ, ಮುಂಬರುವ ಸನ್ಯಾಸಿಗಳಿಗೂ ಏನು ವ್ಯತ್ಯಾಸ?*



ಆಗಿನವರು ಎಲ್ಲವನ್ನೂ ತ್ಯಜಿಸಿದವರು, ಈಗಿನವರು ಎಲ್ಲವನ್ನೂ ಬಿಟ್ಟವರು, ಮುಂಬರುವವರು ಎಲ್ಲವನ್ನೂ (ಕಾರು, ಬಂಗ್ಲೆ, ಆಸ್ತಿ...) ಇಟ್ಟವರು!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಜೀವ ಉಳಿಸಲು ರಕ್ತದಾನ ಮಾಡದ ಹುಡುಗರು ಪ್ರೇಮಪತ್ರವನ್ನು ಮಾತ್ರ ರಕ್ತದಿಂದ ಬರೆಯುತ್ತಾರಲ್ಲಾ...?*
ಪೇಷೆಂಟ್‌ಗಾದರೆ ತಮ್ಮ ರಕ್ತವನ್ನೇ ಕೊಡಬೇಕು; ಪತ್ರಕ್ಕೆ ಮಟನ್ ಸ್ಟಾಲ್‌ನ ಯಾವುದೇ ರಕ್ತ ಆಗುವುದಂತೆ!

ಕೆ.ಎನ್. ನಾರಾಯಣರೆಡ್ಡಿ, ಕೆಜಿಎಫ್
*ಕುಟುಂಬವೈದ್ಯರೆಂದರೆ ಯಾರು ಸಾರ್?*
ನಿಮ್ಮ ಫೀಸಿನಲ್ಲೇ ತಮ್ಮ ಇಡೀ ಕುಟುಂಬವನ್ನು ನಡೆಸುವವರು!

■ ರಾಮ್